ದಿನಾಂಕಃ **25.09.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿ ಆರ್ ಹೆಚ್ ವಕೀಲರಿಂದಃ-</u>

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಡಿಕ್ರಿದಾರರು ಮತ್ತು ತೀರ್ಪು ಋಣಿದಾರರ ಪರಿಚಯ ಇರುತ್ತದೆ. ಡಿಕ್ರಿದಾರರು ತೀರ್ಪು ಋಣಿದಾರರ ವಿರುದ್ಧ ಅಸಲು ದಾವಾ ಸಂಖ್ಯೆ 56ಃ2012 ರಂತೆ ದಾವೆ ಹೂಡಿರುವ ವಿಚಾರ ನನಗೆ ಗೊತ್ತು. ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಆ ಡಿಕ್ರಿಗೂ ನನಗೂ ಯಾವುದೇ ಸಂಬಂಧ ಇಲ್ಲಾ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಆಸ್ತಿಯ ಮೇಲೆ ಡಿಕ್ರಿಯಾಗಿರುತ್ತದೆ ಎಂದರೆ ದಾವಾ ಷೆಡ್ಯೂಲ್ ಆಸ್ತಿಗೂ ನನಗೂ ಸಂಬಂಧ ಇಲ್ಲಾ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕ್ಕುಬಂಧಿಯಾದ ಪೂರ್ವಕ್ಕೆ ಃ ಮೂಡಲ್ಲಪ್ಪ ರವರ ಆಸ್ತಿ, ಪಶ್ಚಿಮಕ್ಕೆ ಃ ಕರಿಯಮ್ಮ ರವರ ಆಸ್ತಿ, ದಕ್ಷಿಣಕ್ಕೆ ಃ ಮುನ್ಸಿಪಲ್ ರಸ್ತೆ, ಉತ್ತರಕ್ಕೆ ಃ ಮುನ್ಸಿಪಲ್ ಆಸ್ತಿ ಯ ನಡುವೆ ಇರುವ ಆಸ್ತಿಗೆ ಡಿಕ್ರಿಯಾಗಿರುತ್ತದೆ ಎಂದರೆ ಆ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲಾ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ನನ್ನ ಆಸ್ತಿ ಇರುತ್ತದೆ. ದಾವಾ ಆಸ್ತಿ ಮೂಲತಃ ಡಿಕ್ರಿದಾರರ ತಂದೆಯಾದ ತಿಮ್ಮಯ್ಯ ರವರ ಆಸ್ತಿ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 232ಃ1974 ರ ದಾವೆಯನ್ನು ಕರಿಯಮ್ಮ ರವರು ಸಂಕಪ್ಪ ರವರ ವಿರುದ್ಧ ಹೂಡಿರುತ್ತಾರೆ. ಯಾವ ಪರಿಹಾರ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸದರಿ ದಾವೆ ಆಸ್ತಿ ತನ್ನದು ಎಂದು ದಾವೆ ಹೂಡಿರುತ್ತಾರೆ. 1974 ರಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನಾನು ಹುಟ್ಟಿರದ ಕಾರಣ ಅಸಲು ದಾವಾ ಸಂಖ್ಯೆ 232ಃ1974 ರ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 232ಃ1974 ರ ಆಸ್ತಿಯ ಅಸಸ್ಮೆಂಟ್ ಸಂಖ್ಯೆ 1586. ಸದರಿ ದಾವಾ ಆಸ್ತಿಯ ಪೂರ್ವಕ್ಕೆ ಎಲ್ ಟಿ ತಿಮ್ಮಯ್ಯನವರ ಆಸ್ತಿ, ಪಶ್ಚಿಮಕ್ಕೆ ಸಂಕಪ್ಪ ರವರ ಆಸ್ತಿ. ಎಲ್ ಟಿ ತಿಮ್ಮಯ್ಯ ಎಂದರೆ ಈ ದಾವೆಯ ಮೂಲ ಮಾಲಿಕ. ಅಸಲು ದಾವಾ ಸಂಖ್ಯೆ 232ಃ1974 ರ ಆಸ್ತಿಯ ಉತ್ತರಕ್ಕೆ ಃ ಸರಸ್ವತಿಪುರ ರಸ್ತೆ, ದಕ್ಷಿಣಕ್ಕೆ ಃ ಕನ್ಸರ್ ವೆನ್ಸಿ ರಸ್ತೆ.

ನಾನು ಹಾಜರುಪಡಿಸಿರುವ ಕ್ರಯಪತ್ರದ ಉತ್ತರ ಮತ್ತು ದಕ್ಷಿಣಕ್ಕೆ ಃ ಕನ್ಸರ್ ವೆನ್ಸಿ ರಸ್ತೆ. ನಿಡಿ-2 ರ ಕ್ರಯಪತ್ರದ ಪೂರ್ವ ಭಾಗಕ್ಕೆ ಃ ಎಲ್ ಟಿ ತಿಮ್ಮಯ್ಯನವರ ಆಸ್ತಿ ಬರುತ್ತದೆ. ನಿಡಿ-6 ಮತ್ತು 7 ರ ಛಾಯಾಚಿತ್ರದ ಪೂರ್ವಕ್ಕೆ ಎಲ್ ಟಿ ತಿಮ್ಮಯ್ಯರವರ ಆಸ್ತಿ ಇರುತ್ತದೆ. ನೀವು ಯಾವ ಆಧಾರದ ಮೇಲೆ ನೀವು ಅಬ್ಜಕ್ಟರ್ ಆಗಿ ಬಂದಿರುತ್ತೀರಿ ಎಂದರೆ ಸಾಕ್ಷಿ ನಮಗೆ ಸೇರಿದ ಜಾಗವನ್ನು ಎಲ್ ಟಿ ತಿಮ್ಮಯ್ಯರವರ ಜಾಗ ಎಂದು ಪುರಸಭೆಯ ಜಾಗ ಎಂದು ತೋರಿಸಿರುವ ಕಾರಣ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಯಾವುದೇ ನೋಟಿಸನ್ನು ಜಾರಿ ಮಾಡದೇ ಏಕಾಏಕಿ ಬಂದಿರುತ್ತಾರೆ. ಆ ಸಮಯದಲ್ಲಿ ತೀರ್ಪು ಋಣಿದಾರರು ಸ್ಥಳದಲ್ಲಿ ಇದ್ದರು. ತೀರ್ಪು ಋಣಿದಾರರೇ ನನಗೆ ಸೇರಿದ ಜಾಗವನ್ನು ತೋರಿಸಿರುತ್ತಾರೆ. ದಾವಾ ಆಸ್ತಿಯನ್ನು ಡಿಕ್ರಿದಾರರ ತಂದೆ 1 ಮತ್ತು 2 ನೇ ತೀರ್ಪು ಋಣಿದಾರರ ತಂದೆಯವರಿಗೆ ಕೇಳಿದಾಗ

ಬಿಟ್ಟು ಕೊಡುವ ಷರತ್ತಿನೊಂದಿಗೆ ಸ್ವಾಧೀನ ವಹಿಸಿದ್ದರು ಎಂದರೆ ಸರಿ.  ನ್ಯಾಯಾಲಯದ ನಿಯೋಗಿಯು ಸ್ಥಳಕ್ಕೆ ಬಂದಾಗ ಬೀರೂರಿನ ಟಿ ಎಂ ಸಿ ಇಂಜಿನಿಯರ್ ಸಹ ಬಂದಿದ್ದರು.  ಆ ಸಮಯದಲ್ಲಿ ಪುರಸಭೆಯಿಂದ ನಾಲ್ಕು ಜನ ಸಿಬ್ಬಂದಿಗಳು ಬಂದಿದ್ದರು.  ಆ ಸಮಯದಲ್ಲಿ ಏನಾದರೂ ಬರವಣಿಗೆ ಮಾಡಿರುತ್ತಾರಾ ಎಂದರೆ ಅವರಿಗೆ ಅನುಕೂಲವಾಗುವಂತೆ ಬರೆದುಕೊಂಡು ಹೋಗಿರುತ್ತಾರೆ.  ನನ್ನ ಸಮಕ್ಷಮದಲ್ಲಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ.  2 ನೇ ತೀರ್ಪು ಋಣಿದಾರರು ಪುರಸಭೆ ಸದಸ್ಯರು ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ನಕಾಶೆಯನ್ನು ಮಾಡಿರುವುದಿಲ್ಲ ಎಂದರೆ ಸರಿ.  ನಾನು ಯಾವುದೇ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ ಮತ್ತು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.